ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪಶ್ನೆ ಸಂಖ್ಯೆ	:	58(18)
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	21.09.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.

ಸಂಖ್ಯೆ	ಪ್ರಶ್ನೆ ಸಂಖ್ಯೆ	ಉತ್ತರ
ಅ)	ರಾಜ್ಯಾದ್ಯಂತ ವೈದ್ಯಕೀಯ ತ್ಯಾಜ್ಯಗಳನ್ನು ಸಂಗ್ರಹಿಸುವ ಮೆಡಿಕಲ್ ಬಯೋವೇಸ್ಟೇಜ್‌ಗಳ ಘಟಕಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯದಲ್ಲಿ ಒಟ್ಟು 26 ಸಾಮೂಹಿಕ ಜೀವ ವೈದ್ಯಕೀಯ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಗಳು (CBMWTF) ಇರುತ್ತವೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ: ಬೆಂಗಳೂರು ಗ್ರಾಮಾಂತರ, ಮೈಸೂರು, ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ತಲಾ 2 ಘಟಕಗಳು, ರಾಮನಗರ, ಹಾಸನ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೊಪ್ಪಳ, ಬಳ್ಳಾರಿ, ಕಲಬುರ್ಗಿ, ಬೀದರ್, ಧಾರವಾಡ, ಕಾರವಾರ, ಯಾದಗಿರಿ, ರಾಯಚೂರು, ಮಂಗಳೂರು, ಗದಗ, ಉಡುಪಿ, ದಾವಣಗೆರೆ, ಬಾಗಲಕೋಟೆ, ಶಿವಮೊಗ್ಗ, ಮತ್ತು ವಿಜಯಪುರ ಜಿಲ್ಲೆಗಳಲ್ಲಿ ತಲಾ 1 ಸಾಮೂಹಿಕ ವೈದ್ಯಕೀಯ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಗಳು ಇರುತ್ತವೆ.
ಆ)	ಸದರಿ ಬಯೋವೇಸ್ಟೇಜ್‌ಗಳ ಘಟಕಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ;	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಅಧಿಕಾರಿಗಳು ಕಾಲಕಾಲಕ್ಕೆ ಈ ಘಟಕಗಳನ್ನು ಪರಿವೀಕ್ಷಣೆ ಮಾಡುತ್ತಿರುತ್ತಾರೆ. ಜೀವ ವೈದ್ಯಕೀಯ ತ್ಯಾಜ್ಯವನ್ನು Common BMW facility ಯಲ್ಲಿ ಇರುವ Incinerator ನಲ್ಲಿ ದಹನ ಮಾಡಲಾಗುತ್ತಿದೆ. ದಹನ ಮಾಡುವ ಯಂತ್ರದ ತಾಪಮಾನ Primary Chamber ನಲ್ಲಿ 850°C ಮತ್ತು Secondary Chamber ನಲ್ಲಿ 1050°C ಇರಬೇಕಾಗಿರುತ್ತದೆ. ಕೇಂದ್ರ ಸರ್ಕಾರದ ಆದೇಶದಂತೆ, ವೈದ್ಯಕೀಯ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಗಳು, ಆನ್ ಲೈನ್ Emission Monitoring

		ವ್ಯವಸ್ಥೆಯನ್ನು ಅಳವಡಿಸಿರುತ್ತಾರೆ. ಮೇ 2020 ತಿಂಗಳಲ್ಲಿ 20 ಘಟಕಗಳು ನಿಗದಿತ ತಾಪಮಾನವನ್ನು ನಿರ್ವಹಿಸದಿರುವುದರಿಂದ ಅವುಗಳಿಗೆ ಕಾರಣ ಕೇಳುವ ನೋಟಿಸ್ಸನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೀಡಲಾಗಿರುತ್ತದೆ.
ಇ)	ವೈದ್ಯಕೀಯ ತ್ಯಾಜ್ಯಗಳನ್ನು ಸಂಗ್ರಹಿಸುವ ಮೆಡಿಕಲ್ ಬಯೋವೇಸ್ಟೇಜ್‌ಗಳ ಘಟಕಗಳನ್ನು ನೂತನವಾಗಿ ಪ್ರಾರಂಭಿಸಬೇಕಾದಲ್ಲಿ ಅನ್ವಯಿಸುವ ನಿಯಮ, ಷರತ್ತುಗಳು ಹಾಗೂ ಮಾನದಂಡಗಳೇನು?	ವೈದ್ಯಕೀಯ ತ್ಯಾಜ್ಯಗಳನ್ನು ಸಂಗ್ರಹಿಸುವ ಮೆಡಿಕಲ್ ಬಯೋವೇಸ್ಟೇಜ್‌ಗಳ ಘಟಕಗಳು ನೂತನವಾಗಿ ಪ್ರಾರಂಭಿಸಬೇಕಿದಲ್ಲಿ ಕೆಳಕಂಡ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. 1. ಇತರೆ ಸಾಮೂಹಿಕ ಜೀವ ವೈದ್ಯಕೀಯ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಘಟಕಗಳಿಂದ 75ಕಿ.ಮೀ. ದೂರದಲ್ಲಿರಬೇಕಾಗಿರುತ್ತದೆ ಮತ್ತು 10,000 ಹಾಸಿಗೆಯ ರೋಗಿಗಳಿಂದ ಬರುವ ಜೀವ ವೈದ್ಯಕೀಯ ತ್ಯಾಜ್ಯವನ್ನು ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಿರಬೇಕಾಗಿರುತ್ತದೆ. 2. ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. 3. ಸ್ಥಾಪನಾ ಸಮ್ಮತಿ ಪತ್ರವನ್ನು ಮಂಡಳಿಯಿಂದ ಪಡೆಯಬೇಕಾಗಿರುತ್ತದೆ. 4. ಕಾರ್ಯಾಚರಣೆಯ 45 ದಿನಗಳ ಮುಂಚೆ, ಮಂಡಳಿಯಿಂದ ಚಾಲನಾ ಸಮ್ಮತಿ ಪತ್ರವನ್ನು ಪಡೆಯಬೇಕಾಗಿರುತ್ತದೆ. 5. ಜೀವ ವೈದ್ಯಕೀಯ ತ್ಯಾಜ್ಯ ನಿರ್ವಹಣಾ ನಿಯಮದಡಿ ಅಧಿಕಾರ ಪತ್ರವನ್ನು ಪಡೆಯಬೇಕಾಗಿರುತ್ತದೆ.

ಸಂಖ್ಯೆ: ಅಪಜೀ 47 ಇಎನ್‌ಜಿ 2020

(ಆನಂದ್ ಸಿಂಗ್)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು